# ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

**ದಿನಾಂಕ : 09-1-2018**

**ಪ್ರಟಕಣೆಯ ಕೃಪೆಗಾಗಿ**

## ಶಿಕ್ಷಣ ಕ್ಷೇತ್ರ ಯಾಂತ್ರಿಕವಾಗಬಾರದು - ಶ್ರೀ ಆದಿತ್ಯ ರಮಣ
## ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ PG CET ಕುರಿತು ತರಬೇತಿ ತರಗತಿ

ಕೊಳ್ಳೇಗಾಲ 09-01-2018 : ಶಿಕ್ಷಣ ಕ್ಷೇತ್ರ ಎಂದೂ ಯಾಂತ್ರಿಕವಾಗಬಾರದು. ಅಧ್ಯಾಪಕರು ನೇರವಾಗಿ ಬೋಧಿಸುವ ವಿಧಾನವೇ ಪ್ರಧಾನ. ಮೆದಳು ಮತ್ತು ಮನಸ್ಸುಗಳ ಮಾಂತ್ರಿಕ ಮಿಲನದಲ್ಲಿ ಬೋಧನೆಯ ವಿಧಾನ ಆಕರ್ಷಕವೂ ಅರ್ಥಪೂರ್ಣವೂ ಆಗಲು ಸಾಧ್ಯ ಎಂದು ನರಗುಂದ ಎಜುಕೇಷನ್ ಫೌಂಡೇಷನ್ ಅಧ್ಯಕ್ಷರಾದ ಶ್ರೀ ಆದಿತ್ಯ ರಮಣ ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ವಾಣಿಜ್ಯಶಾಸ್ತ್ರ ಹಾಗೂ ನಿರ್ವಹಣಾಶಾಸ್ತ್ರ ವಿಭಾಗಗಳಿಂದ ಆಯೋಜಿಸಿದ್ದ "ಪಿಜಿಸಿಇಟಿ" ಕುರಿತ ತರಬೇತಿ ತರಗತಿಯ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಮಾತನಾಡಿದರು.

ಪ್ರಸ್ತುತ ಸ್ನಾತಕೋತ್ತರ ಪದವಿಗೆ ಪ್ರವೇಶಾತಿ ಪಡೆಯಬೇಕಾದರೆ ಪಿಜಿಸಿಇಟಿಯಲ್ಲಿನ ಹಾಜರಾತಿ ಹಾಗೂ ಯಶಸ್ಸು ಕಡ್ಡಾಯವಾಗಿದೆ. ಈ ಪರೀಕ್ಷೆಯಲ್ಲಿ ಯಶಸ್ಸನ್ನು ಕಾಣಬೇಕಾದರೆ ಕಠಿಣ ಪರಿಶ್ರಮ ಹಾಕಿದರೆ ಮಾತ್ರ ಸಾಧ್ಯ. ಕಠಿಣ ಪರಿಶ್ರಮಕ್ಕಿಂತಲೂ ಮುಖ್ಯವಾಗಿ ಪರೀಕ್ಷೆಯ ಗುಣ ಲಕ್ಷಣಗಳನ್ನು ಅರಿಯುವ ಕೌಶಲ್ಯ ಕಲಿಯುವುದು ಅತಿ ಮುಖ್ಯವಾಗುತ್ತಿದೆ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಪ್ರೊ. ಉಮೇಶ ವಿದ್ಯಾರ್ಥಿಗಳು ದೈನಂದಿನ ತರಗತಿಗಳಲ್ಲಿ ಕಲಿಯುವುದಕ್ಕಿಂತಲೂ ಹೆಚ್ಚಾಗಿ ತರಬೇತಿ ತರಗತಿಗಳು, ವಿಶೇಷ ಉಪನ್ಯಾಸ, ವಿಚಾರ ಸಂಕಿರಣ ಮತ್ತು ಕಾರ್ಯಾಗಾರಗಳಲ್ಲಿ ಕಲಿಯಬಹುದಾಗಿದೆ. ಇಲ್ಲಿನ ಸಂಪನ್ಮೂಲ ವ್ಯಕ್ತಿಗಳು ಹೊಸ ಹೊಸ ಅಧ್ಯಯನದಲ್ಲಿ ತೊಡಗಿಸಿಕೊಂಡು ಚಿಂತನೆಗಳನ್ನು ಪಕ್ವವಾಗಿರಿಸಿ ಕೊಂಡಿರುತ್ತಾರೆ. ವಿಶೇಷ ಪರಿಣತಿ, ಸಾಮರ್ಥ ಮತ್ತು ಕೌಶಲ್ಯಗಳನ್ನು ಅಂತರ್ಗತ ಮಾಡಿಕೊಂಡು ವಿದ್ಯಾರ್ಥಿಗಳಿಗೆ ಉನ್ನತ ರೀತಿಯಲ್ಲಿ ಮಾರ್ಗದರ್ಶನ ನೀಡುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳು ಇಂತಹ ವಿಶೇಷ ತರಗತಿಗಳನ್ನು ಸದುಪಯೋಗ ಪಡಿಸಿಕೊಂಡು ತಾವೂ ಕೂಡ ಪರಿಣಿತರಾಗಲು ಪ್ರಯತ್ನಿಸಬೇಕೆಂದು ಕರೆ ನೀಡಿದರು.

ವೇದಿಕೆಯಲ್ಲಿ ಡಾ. ಎಂ. ಪ್ರಭು ಹಾಗೂ ಶ್ರೀಮತಿ ಎಸ್ ಮಮತ ಉಪಸ್ಥಿತರಿದ್ದರು. ಅಂತಿಮ ಪದವಿ ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ನರಗುಂದ ಎಜುಕೇಷನ್ ಫೌಂಡೇಷನ್ ಅಧ್ಯಕ್ಷರಾದ ಶ್ರೀ ಆದಿತ್ಯ ರಮಣ ರವರು "ಪಿಜಿಸಿಇಟಿ" ಕುರಿತ ತರಬೇತಿ ತರಗತಿಯ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ವಿದ್ಯಾರ್ಥಿನಿಯರಿಗೆ ತರಬೇತಿ ನೀಡುತ್ತಿರುವುದು ಚಿತ್ರದಲ್ಲಿ ಶ್ರೀಮತಿ ಎಸ್ ಮಮತ, ಪ್ರಾಚಾರ್ಯ ಪ್ರೊ. ಉಮೇಶ ಹಾಗೂ ಡಾ. ಎಂ ಪ್ರಭುರವರನ್ನು ಕಾಣಬಹುದು.




ತರಬೇತಿಯಲ್ಲಿ ಭಾಗವಹಿಸಿರುವ ವಿದ್ಯಾರ್ಥಿನಿಯರು.

